**ಓ.ಎಸ್. ನಂ. 44/2020** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 15.6.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ವಿ ವಕೀಲರಿಂದಃ</u>

ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ, ಆದರೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಹಂಚಿಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ವಾದಿ ಮರಿಸ್ವಾಮಪ್ಪ ಮತ್ತು ಪುಟ್ಟತಾಯಮ್ಮ ರವರ ಮಗ ಎಂದರೆ ಸಾಕ್ಷಿದಾರರು ಮರಿಸ್ವಾಮಪ್ಪರವರ ಮಗ ಆದರೆ ಪುಟ್ಟತಾಯಮ್ಮ ಸಣ್ಣಪ್ಪ ಎಂಬುವವರ ಹೆಂಡತಿ ಆಗಿರುತ್ತಾರೆ ಎನ್ನುವರು. ವಾದಿ ಪುಟ್ಟತಾಯಮ್ಮ ರವರ ಮಗ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರಿದು ವಾದಿಯ ತಾಯಿ ಹೆಸರು ನಾಗಮ್ಮ ಆಗಿರುತ್ತದೆ ಎನ್ನುವರು. ವಾದಿ ಮರಿಸ್ವಾಮಪ್ಪ ಮತ್ತು ನಾಗಮ್ಮ ರವರ ಮಗನಾಗಿರುತ್ತಾನೆ. ಮರಿಸ್ವಾಮಪ್ಪ ರವರು ಸಣ್ಣಪ್ಪ ಮತ್ತು ಪುಟ್ಟತಾಯಮ್ಮ ರವರ ಮಗ ಎಂದರೆ ಸರಿ. ವಾದಿಯು ಸಣ್ಣಪ್ಪ ಮತ್ತು ಪುಟ್ಟತಾಯಮ್ಮ ರವರ ಮೊಮ್ಮಗ ಎಂದರೆ ಸರಿ. ಸಣ್ಣಪ್ಪ ರವರ ತಾಯಿ ಬಸಮ್ಮ ಎಂದರೆ ನನಗೆ ಗೊತ್ತಿಲ್ಲ. ದಾವಆಸ್ತಿಯು ಮೂಲತಃ ಬಸಮ್ಮರವರಿಗೆ ಸೇರಿರುತ್ತದೆ ಎಂದರೆ ಸರಿ.

ನಿಡಿ7 ರಲ್ಲಿ ನಾನು ನಟರಾಜು ಎಂದು ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಾಯಿಯ ಹೆಸರು ಚಿಕ್ಕಾಲಮ್ಮ ಆಗಿರುತ್ತದೆ. ನನ್ನ ತಾಯಿ 2005 ರಲ್ಲಿ ತೀರಿಕೊಂಡಿರುತ್ತಾರೆ. ನಿಡಿ7 ನ್ನು ತಯಾರಿಸಲು ನನ್ನ ಹೆಸರಿನಲ್ಲಿ ಸ್ಟಾಂಪ್‌ಪೇಪರನ್ನು ಖರೀದಿಸಿರುತ್ತೇನೆ. ಸದರಿ ಸ್ಟಾಂಪ್‌ಪೇಪರನ್ನು ನಾನೇ ಹೋಗಿ ಖರೀದಿ ಮಾಡಿರುತ್ತೇನೆ. ನಿಡಿ7 ರಲ್ಲಿ ಸ್ಟಾಂಪ್‌ಪೇಪರನ್ನು ಚಿಕ್ಕಾಲಮ್ಮ ರವರು ಖರೀದಿ ಮಾಡಿರುತ್ತಾರೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಇಂಗ್ಲೀಷ್ ಗೊತ್ತಾಗುವುದಿಲ್ಲ ಎನ್ನುವರು. ನಿಡಿ7 ರಲ್ಲಿ ಸ್ಟಾಂಪ್‌ಪೇಪರನ್ನು ಖರೀದಿಸಲು ಚಿಕ್ಕಾಲಮ್ಮ ಕೊಟ್ಟಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎನ್ನುವರು. ನಿಡಿ7 ಸ್ಟಾಂಪ್‌ಪೇಪರನ್ನು ಖರೀದಿಸಿರುವ ದಿನಾಂಕ 7 ಸೆಪ್ಟಂಬರ್ 2020, 12.33 ಪಿ.ಎಂ ಎಂದು ಇರುತ್ತದೆ ಎಂದರೆ ಸಾಕ್ಷಿದಾರರು ಅದರಲ್ಲಿರುವುದು ಸತ್ಯ ಎನ್ನುವರು. ನಿಡಿ7 ರ ಸ್ಟಾಂಪ್ ಪೇಪರನ್ನು ಲೇಟ್ ಚಾಮಪ್ಪ ರವರ ಹೆಂಡತಿ ಚಿಕ್ಕಾಲಮ್ಮರವರು ಖರೀದಿಸಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಇರಬಹುದು. ನಿಡಿ7 ರ ಸ್ಟಾಂಪ್‌ಪೇಪರನ್ನು ಖರೀದಿಸಲು 20 ರೂಪಾಯಿಯನ್ನು ಲೇಟ್ ಚಾಮಪ್ಪ ರವರ ಹೆಂಡತಿ ಚಿಕ್ಕಾಲಮ್ಮರವರು ಕೊಟ್ಟಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಇರಬಹುದು. ದಿನಾಂಕ 7.9.2020 ರಂದು ನನ್ನ ತಾಯಿ ಚಿಕ್ಕಾಲಮ್ಮ ರವರು ಜೀವಂತ ಇರಲಿಲ್ಲ ಎಂದರೆ ಸಾಕ್ಷಿದಾರರು ಜೀವಂತವಿದ್ದರು ಎನ್ನುವರು. ಮೇಲೆ 2005 ರಲ್ಲಿ ನಿಮ್ಮ ತಾಯಿ ತೀರಿಕೊಂಡಿರುತ್ತಾರೆ, ಈಗ 7.9.2020 ರಂದು ನಿಮ್ಮ ತಾಯಿ ಜೀವಂತ ಇರುತ್ತಾರೆ ಎಂದು ಹೇಳಿರುತ್ತೀರಿ,

ಇವೆರಡರಲ್ಲಿ ಯಾವುದು ಸತ್ಯ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಾಯಿ ಸ್ಟಾಂಪ್‌ಪೇಪರ್ ಖರೀದಿಸಿರುತ್ತಾರೆ ಎನ್ನುವರು. ಅದೇ ಸ್ಟಾಂಪ್‌ಪೇಪರನಲ್ಲಿ ಪ್ರಮಾಣಪತ್ರವನ್ನು ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. 2020 ರಲ್ಲಿ ನನ್ನ ತಾಯಿ ಸ್ಟಾಂಪ್‌ಪೇಪರನ್ನು ಖರೀದಿ ಮಾಡಿ ಮನೆಯಲ್ಲಿ ಇಟ್ಟಿದ್ದರು. ದಿನಾಂಕ 7.9.2020 ರಂದು ನನ್ನ ತಾಯಿ ಸ್ಟಾಂಪ್‌ಪೇಪರನ್ನು ಖರೀದಿ ಮಾಡಿ ಮನೆಯಲ್ಲಿ ಇಟ್ಟಿರುತ್ತಾರೆ ಎಂದು ನನ್ನ ಅಣ್ಣ ಸಿದ್ದಮಲ್ಲಪ್ಪ ನನಗೆ ಹೇಳಿರುತ್ತಾರೆ. ನನ್ನ ಅಣ್ಣ ಸಿದ್ದಮಲ್ಲಪ್ಪ ತೀರಿಕೊಂಡಿರುತ್ತಾರೆ, ಆದರೆ ದಿನಾಂಕ ಗೊತ್ತಿರುವುದಿಲ್ಲ. ಅವರು ತೀರಿಕೊಂಡು ಸುಮಾರು 15 ವರ್ಷವಾಗಿರುತ್ತದೆ.

ನಿಡಿ7 ರ ಕಂಡಿಕೆ ನಂಬರ್ 2 ರಲ್ಲಿ ಸದರಿ ಪ್ರಮಾಣಪತ್ರವನ್ನು ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು ಇಲ್ಲಿಗೆ ಸಲ್ಲಿಸಲು ವಂಶವೃಕ್ಷದ ಅವಶ್ಯಕತೆ ಇರುವುದರಿಂದ ನಮ್ಮ ಕುಟುಂಬದ ವಂಶವೃಕ್ಷವನ್ನು ಸದರಿ ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಾನು ನಿಡಿ7 ಪ್ರಮಾಣಪತ್ರವನ್ನು ಹುಣಸೂರಿನ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 12/2021 ರ ಕೇಸ್‌ನಲ್ಲಿ ಸಲ್ಲಿಸಿರುತ್ತೇನೆ. ನಿಡಿ7 ರ ಜೆರಾಕ್ಸ ಪ್ರತಿಯನ್ನು ಹುಣಸೂರಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಕೇಸ್ ನಂ. 12/2021 ರ ದಾಖಲಾತಿಯನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಡಿ7 ಪ್ರಮಾಣಪತ್ರವನ್ನು ದಿನಾಂಕ 14.9.2020 ರಂದು ಮಾಡಲಾಗಿರುತ್ತದೆ. ನಿಡಿ7 ನ್ನು 14.9.2020 ರಂದು ತಯಾರಿಸಿ ದಿನಾಂಕ 17.11.2020 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ7 ರ ವಂಶವೃಕ್ಷದಲ್ಲಿ ನನ್ನ ಹೆಸರು ಇರುವುದಿಲ್ಲ. ನಿಡಿ7 ರಲ್ಲಿ ನನ್ನ ಹೆಸರು ಇಲ್ಲದೇ ಇರುವುದರಿಂದ ಅದು ನನ್ನ ಕುಟುಂಬದ ವಂಶವೃಕ್ಷ ಅಲ್ಲ ಎಂದರೆ ಸರಿಯಲ್ಲ. ನಿಡಿ7 ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ10 ದಾಖಲೆಯು ದಿನಾಂಕ 4.2.1975 ರಂದು ಆಗಿರುತ್ತದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ10 ರ ದಾಖಲೆಯ ಸ್ಟಾಂಪ್‌ಪೇಪರನ್ನು ನಾನು 1991 ರಲ್ಲಿ ಖರೀದಿ ಮಾಡಿರುತ್ತೇನೆ. 1975 ರ ಸಾಲಿನಲ್ಲಿ ಆಸ್ತಿಯನ್ನು ಅದಲು ಬದಲು ಮಾಡಿಕೊಂಡಿರುವುದು ಸುಳ್ಳು, ನಿಡಿ10 ನ್ನು ನಾನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. 1991 ರಲ್ಲಿ ಖರೀದಿಸಿರುವ ಸ್ಟಾಂಪ್‌ಪೇಪರನಲ್ಲಿ 1975 ನೇ ಸಾಲಿನಲ್ಲಿ ದಾಖಲಾತಿ ಆಗಿರುತ್ತದೆ ಎಂದು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ10 ದಾಖಲೆಯನ್ನು ಪೋರ್ಜರಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.